ಹೊಡಕೊಳ್ಳಿಕ್ಕತ್ತದ. ವಿಮಲಕ್ಕ, ನಿಮಗ ಎತ್ತಲಿಕ್ಕೆ ಆಗೂದುಲ್ಲ. ನಾ ಬರ್ಲೇನು? ನಿಮ್ಮನ್ನೊಬ್ಬರ್ನ ಬಿಟ್ಟು ಅರುಣ ಎಲ್ಲಿ ಹೋಗ್ಯಾನ?..." ಎಂದು ಫೋನಿನಂತೆಯೇ ಹೊಡೆದುಕೊಳ್ಳಲಾರಂಭಿಸಿದರು. ನನ್ನ ಶಿವತ್ವ ಅಲ್ಲಾಡಿತ್ತು. ಏನು ಮಾಡಬೇಕೆಂದು ತಿಳಿಯದೇ "ಭಕ್ತೆ, ನಾನು ಮತ್ತೆ ಬರುತ್ತೇನೆ. ನಿನ್ನ ಚಿಂತೆಗಳಿಗೆ ಸಮಾಧಾನ ತರುತ್ತೇನೆ. ನಾನು ಬಂದದ್ದನ್ನು ಯಾರ ಬಳಿಯೂ ಹೇಳಬೇಡ. ನಿನ್ನ ಭಕ್ತಿಗೆ ಮೆಚ್ಚಿ ನಿನಗೆ ಕಂಡೆನೇ ಹೊರತು ಉಳಿದವರಿಗೆ ಕಾಣುವದಿಲ್ಲ. ನಿನ್ನ ಮಗನಿಗೂ ಕೂಡ..." ಎಂದದ್ದೇ ಬಾಗಿಲು ತೆರೆದುಕೊಂಡು ಹೊರಬಂದೆ. ಫೋನಿನ ಘಂಟೆಯೂ ನಿಂತು ಹೋಯಿತು. ಪಕ್ಕದ ಮನೆಯ ಕಿಟಕಿಯೂ ಮುಚ್ಚಿಕೊಂಡಿತು.

ವೇಷ ಕಳಚಿದವನಿಗೆ ನಿಲ್ಲಲಾಗಲಿಲ್ಲ. ಮನ ಉದ್ವೇಗಗಳ ಆಗರವಾಗಿತ್ತು. ಗಾಡಿ ಸೀದಾ ಸಹನಾಳ ಹಾಸ್ಟೆಲ್ಲಿಗೆ ಓಡಿತು. "ಹೆಂಗಿದ್ದೀ ಅವ್ವಿ?" ಎಂದು ಕೇಳಿದವನಿಗೆ ಕಂಡಿದ್ದು ಅವಳ ದುಗುಡ ತುಂಬಿದ ಮುಖ. ಆದರೂ "ಆರಾಮಿದ್ದೀನಿ ಮಾಮಾ" ಎಂದವಳು ಹೇಳಿದ್ದು ಹಸೀ ಸುಳ್ಳು ಎಂದು ಯಾರಾದರೂ ಹೇಳಬಹುದಾಗಿತ್ತು. ಪುಸ್ತಕ ಕೊಡಿಸುವ ನೆಪದಿಂದ ವಾರ್ಡನ್‌ನ ಪರ್ಮಿಷನ್ ತೆಗೆದುಕೊಂಡು ಹೊರಗೆ ಕರೆದುಕೊಂಡು ಹೋಗಿ "ಖರೇ ಹೇಳು" ಎಂದೆ. ತೆಕ್ಕೆ ಬಿದ್ದು ಅತ್ತಳು. "ಏನೇನೂ ಘೋಲೊ ಇಲ್ಲ ಮಾಮಾ. ಊಟ ಅಂದ್ರ ವಾಕರಿಕಿ ಬರ್ತದ. ಉಳದಾವ್ರೆಲ್ಲಾ ನನಗ ಅಭ್ಯಾಸ ಮಾಡ್ಲಿಕ್ಕೇ ಬಿಡದನ ಗದ್ಲಾ ಹಾಕ್ತಾರ. ನನ್ನ ಸಾಮಾನೆಲ್ಲ ತುಡುಗ ಮಾಡ್ತಾರ. ರಾತ್ರಿ ಮೈಮ್ಯಾಲೆ ಜೊಂಡಿಗ್ಯಾ ವಗೀತಾರ. ಇನ್ನೂ ಏನೇನೋ... ಹೇಳ್ಲಿಕ್ಕೆ ಬರದಂತಾವು. 'ವಾರ್ಡನ್‌ಗ ಹೇಳ್ತೇನಿ' ಅಂದ್ರ ಹೇಳ್ಯರೇ ನೋಡು... ಏನ ಮಾಡ್ತೇವಂತ...' ಅಂತ ಅಂಜಸ್ತಾರ" ಎನ್ನುತ್ತ ಅತ್ತಳು. ಮೊದಲೇ ಮೃದು ಹುಡುಗಿ. ಹೂವಿನಂತೆ ಬೆಳೆದವಳು. ಇಲ್ಲಿ ಸರಿ ಹೋಗುವುದಿಲ್ಲವೆನಿಸಿತು. ತಾಳಲಾರದವನಂತೆ "ನಡಿ ಮನಿಗೆ" ಎಂದೆ. "ಉಹ್ಞೂಂ, ಬ್ಯಾಡ, ಅಮ್ಮಾ ಬ್ಯಾಡಂತಾಳ" ಎನ್ನುತ್ತ ಕಣ್ಣೊರೆಸಿಕೊಂಡಳು. "ನಿಮ್ಮವ್ವಗ ನಾ ಹೇಳ್ತೇನಿ. ಅಜ್ಜಿ ನಿನ್ನ ಹಾದಿ ನೋಡ್ಲಿಕತ್ತಾಳ. ನಡಿ" ಎಂದೆ. ಆದರೂ ಅಳುಕುತ್ತ "ಮತ್ತ... ಮಾಮಿ..." ಎಂದು ನಿಲ್ಲಿಸಿದಳು. "ಮಾಮಿ ಕುಂದಗೋಳಕ್ಕ ಹೋಗ್ಯಾಳ. ಬಂದ ಕೂಡ್ಲೆ ಅಕಿಗೆ ನಾ ಹೇಳ್ತೇನಿ" ಎಂದು ವಾರ್ಡನ್‌ಳ ಒಪ್ಪಿಗೆ ಪಡೆದೇ ಮನೆಗೆ ಕರೆತಂದೆ. ಸಹನಾಳ ಲೋಕಲ್ ಗಾರ್ಡಿಯನ್ ನಾನೇ ಆಗಿದ್ದರಿಂದ ತೊಂದರೆಯಾಗಲಿಲ್ಲ. ವಾತ್ಸಲ್ಯದ ಸೆಳೆತದ ಜೊತೆ ಸ್ವಾರ್ಥದ ಎಳೆಯೂ ಇಲ್ಲದಿರಲಿಲ್ಲ. ನಾನು ಮನೆ ಬರೆಸಿಕೊಂಡರೆ ಅಕ್ಕ ಜಗಳವಾಡಲು ಹಿಂದೆ ಮುಂದೆ ನೋಡುತ್ತಾಳೆ. ಮಗಳಿಗೋಸ್ಕರ...

ಅವ್ವ ಸಹನಾಳನ್ನು ನೋಡಿ ಆನಂದಭರಿತಳಾದಳು. "ನಾ ನಿನ್ನ ಭಾಳ ನೆನಸ್ಲಿಕತ್ತಿದ್ದೆ ನನ್ನ ತಾಯಿ. ಅಂತೂ... ಈಶ್ವರಾ... ಖರೇನ ಜೋರಿದ್ದೀಯಪಾ" ಎನ್ನುತ್ತ ಇನ್ನೇನೋ ಹೇಳಲು ಬಾಯಿ ತೆರೆದವಳು ಒಮ್ಮೆಲೆ ನನ್ನ ಮುಖ ನೋಡಿ ಸುಮ್ಮನಾದಳು. "ಯಾವ ಈಶ್ವರಾ? ನಮ್ಮ ಕಾರ್ಪೆಂಟರ್ ಬಂದಿದ್ನೇನು?" ಎಂದು ಕೇಳಿದೆ. "ಇಲ್ಲೇಳು... ನನ್ನ ದೇವರು ಈಶ್ವರನ ಬಗ್ಗೆ ನಾ ಹೇಳತಿರ್ತೇನಿ" ಎಂದು ಕೈ ಮುಗಿದಳು. ಮುಖ ಹೊಳೆಯತೊಡಗಿತ್ತು. ಆಗಲೇ ಚಿಕ್ಕಮ್ಮನ ಮಗ ಸುರೇಶ ಮಗಳೊಡನೆ ಬಂದಿದ್ದ. "ಏನಂತೀ ಮೌಶಿ?" ಎಂದು ಅವ್ವನೊಡನೆ ಒಂದು ಗಂಟೆ ಹರಟಿದ. ನಾನೇ ಪಾನಕ ಬೆರೆಸಿ ಕೊಟ್ಟೆ. ಮಗಳಿಗೆ "ಅಜ್ಜಿಗೆ ಮಾಲಕಂಸ ರಾಗದ ಒಂದು ಹಾಡು ಹಾಡಿ ತೋರ್ಸವಾ" ಎಂದ. ಮಗು ಸುಶ್ರಾವ್ಯವಾಗಿ ಹಾಡಿದಳು. ಎಲ್ಲರಿಗೂ ಮನ ತುಂಬಿ ಬಂದಿತ್ತು. ಅವ್ವ, ನಾನು, ಸಹನಾ ಮುಕ್ತಕಂಠದಿಂದ ಪ್ರಶಂಸಿಸಿದೆವು. "ಮೊದಲ ಮನಿ ಬಾಜೂಕ ಒಬ್ಬರ ಕಡೆ ಎರಡ ವರ್ಷ ಕಲತ್ಲು. ಶ್ರೀಪಾದ ಹೆಗಡೆಯವರ ಕಡೆ ಸೇರಸಲಿಕ್ಕೆ